# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 22-8-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## 1–20 ಆಗಸ್ಟ್ ಅವಧಿಯಲ್ಲಿ ಮಲೇಶೀಯನ್ ಪಾಮೆಣ್ಣೆ ರಫ್ತು 9 ಶೇಕಡಾ ಹೆಚ್ಚಳ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ ಎರಡನೇ ಅವಧಿಯಲ್ಲಿ ಹೆಚ್ಚಳಗೊಂಡಿದ್ದು, ಇಂದು 3.79 ಶೇಕಡಾ ಹೆಚ್ಚಳಗೊಂಡಿದೆ. ಆಗಸ್ಟ್ 1–20 ರ ಅವಧಿಯಲ್ಲಿ ಮಲೇಶಿಯಾದಿಂದ ಪಾಮೆಣ್ಣೆ ರಫ್ತು 9 ಶೇಕಡಾ ಹೆಚ್ಚಳಗೊಂಡು 7,28,165 ಟನ್‌ಗಳಾಗಿದೆಯೆನ್ನಲಾಗಿದೆ(ಕಾರ್ಗೋ ಸರ್ವೇಯರ್ ITS)

## ಭತ್ತ ಬಿತ್ತನೆ 8.25 ಶೇಕಡಾ ಹಿನ್ನಡೆ

ಆಗಸ್ಟ್ 18 ರ ತನಕ ದೇಶದ ಭತ್ತ ಬಿತ್ತನೆ ಪ್ರದೇಶ ಹಿಂದಿನ ವರ್ಷಕ್ಕೆ ಹೋಲಿಸಿದಾಗ 8.25 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಹಿಂದಿನ ವಾರದ 15 ಶೇಕಡಾ ಇಳಿಕೆಯಿಂದ 8.25 ಶೇಕಡಾ ಇಳಿಕೆಗೆ ಪರಿಸ್ಥಿತಿ ಸುಧಾರಣೆಗೊಂಡಿದೆ(ಉತ್ತಮ ಪಡಿಸಿಕೊಂಡಿದೆ) ಯೆನ್ನಲಾಗಿದೆ.

## ಅಕ್ಕಿ ದರ ಹೆಚ್ಚಳ

ಪಶ್ಚಿಮ ಏಶಿಯಾ ಹಾಗೂ ಬಾಂಗ್ಲಾದೇಶಗಳಿಂದ ಭಾರತದ ಅಕ್ಕಿಗೆ ರಫ್ತು ಬೇಡಿಕೆ ಹೆಚ್ಚಳವಾಗಿದ್ದು, ಭಾರತದಲ್ಲಿ ಅಕ್ಕಿ ದರಗಳು ಕ್ವಿಂಟಾಲಿಗೆ ರೂ.20 ರಿಂದ 30 ಶೇಕಡಾ ದರ ಹೆಚ್ಚಳವಾಗಿದೆ. ಮಳೆ, ಹವಾಮಾನ ವ್ಯತ್ಯಯದಿಂದ ಅಕ್ಕಿ ಉತ್ಪಾದನೆಯೂ ಇಳಿಕೆಯಾಗುವ ನಿರೀಕ್ಷೆಯಿದ್ದು ದರ ಹೆಚ್ಚಳಕ್ಕೆ ಕಾರಣವಾಗುವ ಸಾಧ್ಯತೆಗಳಿವೆ.

## ತೊಗರಿ ಬಿತ್ತನೆ ಪ್ರದೇಶ ಇಳಿಕೆ

ಅಸಮರ್ಪಕ ಮಳೆ, ರೈತರು ವಾಣಿಜ್ಯ ಬೆಳೆಗಳತ್ತ ಆಕರ್ಷಣೆಗೊಂಡಿರುವುದು ಮುಂತಾದ ಕಾರಣಗಳಿಂದ ಈ ವರ್ಷ ತೊಗರಿ ಬಿತ್ತನೆ ಪ್ರದೇಶ ಇಳಿಕೆಯಾಗಿದ್ದು, ಉತ್ಪಾದನೆಯೂ ಇಳಿಕೆಯಾಗುವ ಸಾಧ್ಯತೆಗಳಿವೆ. ಮ್ಯಾನ್ಮಾರ್ ಮತ್ತಿತರ ದೇಶಗಳಿಂದ ಸಾಕಷ್ಟು ತೊಗರಿ, ತೊಗರಿಬೇಳೆ ಆಮದಾಗುತ್ತಿರುವುದರಿಂದ ಹಾಗೂ ದಾಸ್ತಾನು ಸಾಕಷ್ಟಿರುವುದರಿಂದ ಹೆಚ್ಚಿನ ದರ ಹೆಚ್ಚಳ ನಿಯಂತ್ರಣದಲ್ಲಿರುವ ಸಾಧ್ಯತೆಯಿದೆ.